# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1312
ಸದಸ್ಯರ ಹೆಸರು : ಶ್ರೀ ಹೆಚ್.ಪಿ. ಸುಧಾಮ್ ದಾಸ್
(ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 22-08-2025
ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP TSP ಅಡಿಯಲ್ಲಿ ಕೃಷಿ ಇಲಾಖೆಗೆ 2021-22, 2022-23, 2023-24, ಹಾಗೂ 2024-25 ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನವೆಷ್ಟು;</td><td>
ವಿಶೇಷ ಘಟಕ ಉಪ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳಡಿ 2021-22, 2022-23, 2023-24, ಹಾಗೂ 2024-25 ಹಣಕಾಸು ವರ್ಷಗಳಲ್ಲಿ ಕೃಷಿ ಇಲಾಖೆಗೆ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಗಿನಂತಿದೆ.<br>
(ರೂ.ಲಕ್ಷಗಳಲ್ಲಿ)
<table>
<tr><th rowspan="2">ಕ್ರ.ಸಂ</th><th rowspan="2">ವರ್ಷ</th><th colspan="3">ಬಿಡುಗಡೆಯಾದ ಅನುದಾನ</th></tr>
<tr><th>SCSP</th><th>TSP</th><th>ಒಟ್ಟು</th></tr>
<tr><td>1</td><td>2021-22</td><td>51782.07</td><td>29840.57</td><td>81622.64</td></tr>
<tr><td>2</td><td>2022-23</td><td>57548.89</td><td>26443.99</td><td>83992.88</td></tr>
<tr><td>3</td><td>2023-24</td><td>35284.03</td><td>15570.30</td><td>50854.33</td></tr>
<tr><td>4</td><td>2024-25</td><td>38687.58</td><td>17355.55</td><td>56043.13</td></tr>
</table>
ಸರ್ಕಾರದ ಮಹತ್ವಾಕಾಂಕ್ಷೆ ಕಾಯ್ದೆ SCSP/TSP ಅಡಿಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಗೆ 2021-22, 2022-23, 2023-24 ಹಾಗೂ 2024-25 ಹಣಕಾಸು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ:<br>
(ರೂ.ಲಕ್ಷಗಳಲ್ಲಿ)
<table>
<tr><th rowspan="2">ಕ್ರ.ಸಂ</th><th rowspan="2">ವರ್ಷ</th><th colspan="3">ಬಿಡುಗಡೆಯಾದ ಅನುದಾನ</th></tr>
<tr><th>SCSP</th><th>TSP</th><th>ಒಟ್ಟು</th></tr>
<tr><td>1</td><td>2021-22</td><td>2342.02</td><td>1079.91</td><td>3421.93</td></tr>
<tr><td>2</td><td>2022-23</td><td>7986.34</td><td>1723.32</td><td>9709.66</td></tr>
<tr><td>3</td><td>2023-24</td><td>1786.01</td><td>742.16</td><td>2528.17</td></tr>
<tr><td>4</td><td>2024-25</td><td>771.67</td><td>345.00</td><td>1116.67</td></tr>
</table>
</td></tr>
<tr><td>ಆ)</td><td>ಸದರಿ ಹಣಕಾಸು ವರ್ಷಗಳ ಅವಧಿಗಳ ಕೃಷಿ ಇಲಾಖೆಗೆ ಬಿಡುಗಡೆಯಾಗಿರುವ SCSP TSP ಅನುದಾನಗಳನ್ನು ಯಾವ ಯಾವ ಯೋಜನೆಗಳ ಜಾರಿಗೆ ವ್ಯಯಿಸಲಾಗಿದೆ.</td><td>
2021-22, 2022-23, 2023-24, ಹಾಗೂ 2024-25ನೇ ಸಾಲುಗಳಲ್ಲಿ ಕೃಷಿ ಇಲಾಖೆಗೆ ವಿಶೇಷ ಘಟಕ ಉಪ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳಡಿ ಅನುಷ್ಠಾನಗೊಳಿಸಿದ ಯೋಜನೆ/ಕಾರ್ಯಕ್ರಮಗಳ ಪಟ್ಟಿಯನ್ನು ಅನುಬಂಧ-1ರಲ್ಲಿ ಪೆನ್ ಡ್ರೈವ್ ಮುಖಾಂತರ ಒದಗಿಸಲಾಗಿದೆ.<br>
ಜಲಾನಯನ ಅಭಿವೃದ್ಧಿ ಇಲಾಖೆಗೆ SCSP/TS ಘಟಕದಡಿಯಲ್ಲಿ ಸದರಿ ಹಣಕಾಸು ವರ್ಷಗಳಲ್ಲಿ
</td></tr>
</table>

<table>
<tr>
<td></td>
<td></td>
<td>ಬಿಡುಗಡೆಯಾಗಿರುವ ಅನುದಾನವನ್ನು ಕೆಳಕಂಡ ಯೋಜನೆಗಳ ಅನುಷ್ಠಾನಕ್ಕೆ ವ್ಯಯಿಸಲಾಗಿದೆ.
<table>
<tr><td>ವರ್ಷ</td><td>ಕೇಂದ್ರ ಪುರಸ್ಕೃತ ಯೋಜನೆಗಳು</td></tr>
<tr><td>2021-22</td><td>1) ಪ್ರಧಾನ ಮಂತ್ರಿ ಕೃಷಿ ಸಿಂಚಯಿ-ಯೋಜನೆ- ಜಲಾನಯನ ಅಭಿವೃದ್ಧಿ ಘಟಕ 2.0 & ಇತರೆ ಉಪಚಾರಗಳು<br>2) ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ</td></tr>
<tr><td>2022-23</td><td rowspan="3">1) ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಜಲಾನಯನ ಅಭಿವೃದ್ಧಿ ಘಟಕ 2.0<br>2) ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ (RAD-RKVY)</td></tr>
<tr><td>2023-24</td></tr>
<tr><td>2024-25</td></tr>
</table>
</td>
</tr>
<tr>
<td>ಇ)</td>
<td>SCSP TSP ಕಾಯ್ದೆಯ ಸೆಕ್ಷನ್ 17ರ ಅನ್ವಯ ಕೃಷಿ ಇಲಾಖೆಯು ಸದರಿ ಹಣಕಾಸು ವರ್ಷಗಳ ಅವಧಿಗಳಲ್ಲಿ ಪರಿಶಿಷ್ಟ ಸಮುದಾಯ ಹಾಗೂ ಸಾಮಾನ್ಯ ಸಮುದಾಯದ ಅಭಿವೃದ್ಧಿ ಅಂತರವನ್ನು ಗುರುತಿಸಿ, ಸಂಬಂಧಿಸಿದ ಸಮುದಾಯ ಅಭಿವೃದ್ಧಿ ಅಭ್ಯಯಿಸಿ/ ಸಮಾಲೋಚಿಸಿ ತಯಾರಿಸಿರುವ ಅನುದಾನ ವಿನಿಯೋಗಗಳಿಗೆ ಸಂಬಂಧಿಸಿದ ಉಪಯೋಜನೆ ಕಾರ್ಯಯೋಜನೆಗಳಾವುವು: (ಪ್ರತಿಗಳನ್ನು ಒದಗಿಸುವುದು)</td>
<td>ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ(ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ 17ನೇ ಪ್ರಕರಣದಲ್ಲಿ ನಿಗದಿಪಡಿಸಿರುವಂತೆ (ಪ್ರಕರಣ 14ರಲ್ಲಿ ನೋಡಲ್ ಇಲಾಖೆಯಾದ ಸಮಾಜ ಕಲ್ಯಾಣ ಇಲಾಖೆಯು ಸೂಚಿಸಿದಂತೆ) ರಾಜ್ಯ ಯೋಜನಾ ಆದ್ಯತೆಗಳ ವ್ಯಾಪ್ತಿಯಲ್ಲಿ ಅನುಸೂಚಿತ ಜಾತಿಗಳ ಉಪ-ಯೋಜನೆ/ ಬುಡಕಟ್ಟು ಉಪ-ಯೋಜನೆ ಸ್ಕೀಮುಗಳನ್ನು(ಯೋಜನೆ/ಕಾರ್ಯಕ್ರಮಗಳು) ರೂಪಿಸಲಾಗಿದ್ದು, ಅನುಸೂಚಿತ ಜಾತಿಗಳ ಉಪ-ಯೋಜನೆ/ ಬುಡಕಟ್ಟು ಉಪ-ಯೋಜನೆ ಸ್ಕೀಮುಗಳನ್ನು (ಯೋಜನೆ/ಕಾರ್ಯಕ್ರಮಗಳು) ಒಳಗೊಂಡ ಉಪ-ಯೋಜನೆಗಳನ್ನು ತಯಾರಿಸಲಾಗಿರುತ್ತದೆ.<br>ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನಲ್ಲಿ 2021-22 ರಿಂದ 2024-25ರ ಆರ್ಥಿಕ ವರ್ಷಗಳಲ್ಲಿ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಗಳ ಪ್ರತಿಯನ್ನು ಅನುಬಂಧ-2 ರಲ್ಲಿ ಪೆನ್ ಡ್ರೈವ್ ಮುಖಾಂತರ ಒದಗಿಸಲಾಗಿದೆ.</td>
</tr>
<tr>
<td>ಈ)</td>
<td>SCSP TSP ಕಾಯ್ದೆ ಸೆಕ್ಷನ್ 15 ಹಾಗೂ 16ರಡಿ ಕಡ್ಡಾಯ ಪಡಿಸಿರುವಂತೆ ಸದರಿ ಅನುದಾನದಡಿ ಬಿಡುಗಡೆಯಾಗಿರುವ ಹಣವನ್ನು ಕೇವಲ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/</td>
<td>ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪ ಹಂಚಿಕೆ(ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ ಪ್ರಕರಣ 15ರಲ್ಲಿ "ಈ ಅಧಿನಿಯಮ ಹಾಗೂ ಇದರ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಹೇಳಲಾದ ನಿಬಂಧನೆಗಳಿಗನುಸಾರವಾಗಿ ಅನುಸೂಚಿತ ಜಾತಿಗಳು/ಅನುಸೂಚಿ ಪಂಗಡಗಳ ವ್ಯಕ್ತಿಗಳಿಗೆ ಅಥವಾ</td>
</tr>
</table>

| | | |
|---|---|---|
| | sಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಖಾತ್ರಿಪಡಿಸಲು ಕೃಷಿ ಇಲಾಖೆ ಕೈಗೊಂಡಿರುವ ಕ್ರಮಗಳಾವುವು? (ಸಂಬಂಧಿಸಿದ ದಾಖಲೆ ಒದಗಿಸುವುದು) | ಅನುಸೂಚಿತ ಜಾತಿಗಳು/ಅನುಸೂಚಿ ಪಂಗಡಗಳ ಕುಟುಂಬಗಳಿಗೆ ಅಥವಾ ಅನುಸೂಚಿತ ಜಾತಿಗಳು/ಅನುಸೂಚಿ ಪಂಗಡಗಳ ಜನರ ವಾಸಸ್ಥಳಗಳಿಗೆ ಅಥವಾ ಬುಡಕಟ್ಟು ಪ್ರದೇಶಗಳಿಗೆ ನೇರ ಮತ್ತು ಪ್ರಮಾಣ ನಿರ್ಧರಿಸಬಹುದಾದ ಪ್ರಯೋಜನ ಒದಗಿಸುವಂಥ ಮತ್ತು ಅಭಿವೃದ್ಧಿಯಲ್ಲಿನ ಅಂತರಗಳನ್ನು ತುಂಬಲು ಸಾಧ್ಯಗೊಳಿಸುವಂಥ ಸ್ಕೀಮುಗಳನ್ನು ಮಾತ್ರ ಒಳಗೊಂಡಿರತಕ್ಕದ್ದು" ಎಂದು ನಿಗದಿಪಡಿಸಲಾಗಿರುತ್ತದೆ.<br><br>ಮುಂದುವರೆದು, ಪ್ರಕರಣ 16ರಲ್ಲಿ "ಅನುಸೂಚಿತ ಜಾತಿಗಳು/ಅನುಸೂಚಿ ವರ್ಗಗಳನ್ನು ಅವರ ಅರ್ಹತೆಗೆ ಅನುಗುಣವಾಗಿರುವ, ಪ್ರಗತಿಯಲ್ಲಿರುವ ಸಾಮಾನ್ಯ ಸ್ಕೀಮುಗಳ ವ್ಯಾಪ್ತಿಯಲ್ಲಿ ತರಲಾಗಿದೆ ಎಂಬುದನ್ನು ಇಲಾಖೆಗಳು ಖಚಿತಪಡಿಸಿಕೊಳ್ಳತಕ್ಕದ್ದು" ಎಂದು ನಿಗದಿಪಡಿಸಲಾಗಿರುತ್ತದೆ.<br><br>ಕೃಷಿ ಇಲಾಖೆಯ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಒದಗಿಸುವ ವಿವಿಧ ಸಹಾಯಧನ/ಸೌಲಭ್ಯಗಳು ವೈಯಕ್ತಿಕ ಫಲಾನುಭವಿ ಆಧಾರಿತವಾಗಿರುತ್ತವೆ. ಸದರಿ ಸೌಲಭ್ಯ/ಸಹಾಯಧನವನ್ನು ನೇರವಾಗಿ ಅನುಸೂಚಿತ ಜಾತಿ/ಅನುಸೂಚಿ ಪಂಗಡಗಳ ಫಲಾನುಭವಿಗಳಿಗೆ ತಲುಪಿಸಲಾಗುತ್ತಿದೆ. ಕೃಷಿ ಇಲಾಖೆಯಿಂದ ವಿವಿಧ ಸೌಲಭ್ಯ ಪಡೆಯಲು ರೈತರು Farmer Registration & Unified Beneficiary Information System - FRUITS ಪೋರ್ಟಲ್ ನಲ್ಲಿ ನೋಂದಣಿಯಾಗಿ Farmers Identification number (FID) ಹೊಂದಿರಬೇಕಾಗಿರುತ್ತದೆ. FRUITS ತಂತ್ರಾಂಶವು ರೈತರ ವರ್ಗ/ಜಾತಿಯನ್ನು ದೃಢೀಕರಿಸಲು ಕಂದಾಯ ಇಲಾಖೆಯ ತಂತ್ರಾಂಶದೊಂದಿಗೆ (ಅಟಲ್ ಜನ ಸ್ನೇಹಿ ಕೇಂದ್ರ) ಸಂಯೋಜನೆಗೊಂಡಿದ್ದು, ಕಂದಾಯ ಇಲಾಖೆ ವಿತರಿಸುವ ಜಾತಿ ಪ್ರಮಾಣ ಪತ್ರದಲ್ಲಿ ಸೃಜಿಸುವ RD ನಂಬರ್ ಅನ್ನು FRUITS ತಂತ್ರಾಂಶದಲ್ಲಿ ರೈತರಿಗೆ ಸೃಜಿಸುವ FID ಯೊಂದಿಗೆ ಲಿಂಕ್ ಮಾಡಿ ರೈತರ ವರ್ಗ/ಜಾತಿಯನ್ನು ನಿರ್ಧರಿಸಲಾಗುವುದರಿಂದ ಅನುಸೂಚಿತ ಜಾತಿಗಳು/ಅನುಸೂಚಿ ಪಂಗಡಗಳ ರೈತರಿಗೆ ನೇರವಾಗಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>ಕೃಷಿ ಇಲಾಖೆಯಡಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿದ್ದು ಸಮುದಾಯ ಆಧಾರಿತ ಕಾರ್ಯಕ್ರಮಗಳು ಇರುವುದಿಲ್ಲ. ಕೃಷಿ ಇಲಾಖೆಯಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿ ಪಂಗಡಗಳ ಸಮುದಾಯ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಯಾವುದೇ ಪ್ರತ್ಯೇಕ ಕಾರ್ಯಕ್ರಮಗಳು ಇರುವುದಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳ - |

| | | |
|---|---|---|
| | | ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಘಟಕದಡಿ ಬಿಡುಗಡೆಯಾಗಿರುವ ಅನುದಾನವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಳಿಗೆ ಸೇರಿರುವ ವ್ಯಕ್ತಿ, ಸದರಿ ಸಮುದಾಯ ವಾಸಿಸುತ್ತಿರುವ ಕಾಲೋನಿ/ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಬಳಸಲು ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು:<br>1) **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ 2.0 ಯೋಜನೆಯಡಿ** (PMKSY-WDC 2.0) ಯೋಜನಾ ಪ್ರದೇಶದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಅರ್ಹ ರೈತರು ಇದ್ದಲ್ಲಿ ಸದರಿ ರೈತರ ಜಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸಿಕೊಂಡು ಖಾತ್ರಿಪಡಿಸಿಕೊಂಡ ಮೇಲೆ ಯೋಜನೆಯ ಸವಲತ್ತುಗಳನ್ನು ನೀಡಲಾಗುತ್ತಿದೆ.<br>2) **ಮಳೆ ಆಧಾರಿತ ಪ್ರದೇಶ ಅಭಿವೃದ್ಧಿ (RKVY-RAFTAAR ಮೂಲಕ) ಯೋಜನೆ**ಯು ಗುಚ್ಛಗ್ರಾಮ ಆಧಾರಿತ ಯೋಜನೆಯಾಗಿದ್ದು, ಯೋಜನೆಯಡಿ ಆಯ್ಕೆಗೊಂಡ ಗುಚ್ಛಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿರುವ ಅರ್ಹ ರೈತರು ಇದ್ದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಖಾತ್ರಿಪಡಿಸಿಕೊಂಡ ಮೇಲೆ ಯೋಜನೆಯ ಸವಲತ್ತುಗಳನ್ನು ನೀಡಲಾಗುವುದು. |

**ಸಂಖ್ಯೆ:AGRI/118/ASC/2025**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು.**